**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ನ್ಯಾಯಾಲಯ, ಕನಕಪುರ .**

ಸಿಸಿಃ **582/2009**

ಚಾಸಾ-**4**

ಪ್ರಾಸಾ **-1**

ಹೆಸರು : ಪಿ.ಮಂಜುನಾಥ್

ತಂದೆ ಹೆಸರು : ಲೇಟ್ ದಾಳಿಗಯ್ಯ

ವಯಸ್ಸು : **49** ವರ್ಷ

ಉದ್ಯೋಗ : ಸರ್ವೆ ಅಧೀಕ್ಷಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸ : ನೆಲಮಂಗಲ

ದಿನಾಂಕಃ**-23.12.2025** ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ದಂಡ ಪ್ರಕ್ರಿಯಾ ಸಂಹಿತೆ 299 ರಡಿಯಲ್ಲಿ ಮುಖ್ಯ ವಿಚಾರಣೆ ಎಪಿಪಿ ಅವರಿಂದ</u>**

**ನನಗೆ 2006 ರಲ್ಲಿ ರೆವಿನ್ಯೂ ಸರ್ವೆಯರ್ ಆಗಿ ತಹಶೀಲ್ದಾರ್ ಕಚೇರಿ ಕನಕಪುರಕ್ಕೆ ಡೆಪ್ಯೂಟೇಷನ್ ಮೇಲೆ ಹಾಕಿದ್ದು ಅಲ್ಲಿ 6 ತಿಂಗಳ ಕಾಲ ನಾನು ನನ್ನ ಕರ್ತವ್ಯ ನಿರ್ವಹಿಸುತ್ತಿದ್ದೇನೆ.**

ದಿಃ**29.04.2006** ರಲ್ಲಿ ಉಯ್ಯಂಬಳ್ಳಿ ಹೋಬಳಿಯ ಚಿಕ್ಕಕೊಪ್ಪ ಗ್ರಾಮದ ಸರ್ವೆ ನಂ.**35** ರ ಪ್ರದೇಶಕ್ಕೆ ಮೇಲಾಧಿಕಾರಿಯ ಸೂಚನೆಯ ಮೇರೆಗೆ ಅರಣ್ಯ ಇಲಾಖಾ ಸಿಬ್ಬಂದಿ, ಮೈನ್ಸ ಅಂಡ್ ಗಣಿಗಾರಿಕೆ ಇಲಾಖೆ ಮತ್ತು ಸರ್ವೆ ಇಲಾಖೆಯಿಂದ ನಾವುಗಳು ಸದರಿ ಸ್ಥಳಕ್ಕೆ ಹೋಗಿದ್ದೆವು. ನಾವು ಸದರಿ ಜಾಗದಲ್ಲಿ ಸುತ್ತೋಲೆಯ ಪ್ರಕಾರ ಸರ್ವೆ ಮಾಡಿ ನಂತರ ಕಚೇರಿಗೆ ಬಂದು ಈ ಸಂಬಂಧ ನಕ್ಷೆಯನ್ನು ತಯಾರು ಮಾಡಿರುತ್ತೇವೆ. ಸರ್ವೆ ನಂ.**35** ರಲ್ಲಿ **1** ಎಕರೆ **16** ಗುಂಟೆಯಷ್ಟು ಅರಣ್ಯ ಜಾಗವೂ ಒತ್ತುವರಿಯಾಗಿದ್ದು ಈ ಸಂಬಂಧ ಅಳತೆ ಮಾಡಿ ನಕಾಶೆಯನ್ನು ತಯಾರು ಮಾಡಿರುತ್ತೇವೆ.

ಸಾಕ್ಷಿಗೆ ಈಗ ನಕ್ಷೆಯ ದೃಢೀಕೃತ ಪ್ರತಿಯನ್ನು ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿ.ಪಿ.**1** ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.**1**(ಎ) ಎಂದು ಈಗ ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಮೊದಲನೇ ಅಪರ ಸಿಜೆ ಮತ್ತು ಜೆಎಂಎಫ್‌ಸಿ,

ಕನಕಪುರ .